# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ವಾರ್ಡ್ ಸಂ. 174-ಹೆಚ್.ಎಸ್.ಆರ್ ಬಡಾವಣೆ,

## Ward DETER Commitee

ಮಾನ್ಯ ಅಧ್ಯಕ್ಷರು/ನೋಡಲ್ ಅಧಿಕಾರಿ, ಸ.ಕಾ.ನಿ.ಅ. (ಎಸ್.ಡಬ್ಲ್ಯೂ.ಡಿ) ರವರು ದಿನಾಂಕ: 29.05.2021 ರಂದು ಸಂಜೆ 03:00 ಘಂಟೆಗೆ Ward DETER Commitee ಅನ್ನು 174-ಹೆಚ್.ಎಸ್.ಆರ್ ಬಡಾವಣೆ, ವಾರ್ಡ್ ಕಛೇರಿ (ಹೆಚ್.ಎಸ್.ಆರ್ ಉಪವಿಭಾಗ) ರಲ್ಲಿ ನಡೆಸಿದ್ದ, ವಾರ್ಡ್ ಸಮಿತಿ ಸಭೆಯ ನಡುವಳಿಗಳು.

**ಉಪಸ್ಥಿತರು:**

**ಹಾಜರಿದ್ದ ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿ, ಕಾರ್ಯದರ್ಶಿ, ಸದ್ಯಸರುಗಳು, ಅಧಿಕಾರಿ ಹಾಗೂ ಸಿಬ್ಬಂದಿ ವರ್ಗದವರು**

| ಕ್ರ.ಸಂ | ಹೆಸರು | ಹುದ್ದೆ | ಮೋಬೈಲ್ ಸಂಖ್ಯೆ |
|---|---|---|---|
| 1 | ಶ್ರೀ ಬಿ.ಚಂದ್ರಶೇಖರ್ | ವಾರ್ಡ್ ನೋಡಲ್ ಅಧಿಕಾರಿ (ಎ.ಇ.ಇ) | 9448376415 |
| 2 | ಶ್ರೀ ರಾಮೇಗೌಡ.ಕೆ.ಎಸ್ | ಕಾರ್ಯದರ್ಶಿ, ಸಹಾಯಕ ಅಭಿಯಂತರರು ವಾರ್ಡ್ ಸಂ.174 | 7795356105 |
| 3 | ಶ್ರೀ ಟಿ.ಹನುಮಂತರಾಯ | ಸಹಾಯಕ ಕಾರ್ಯನಿರ್ವಹಕ ಅಭಿಯಂತರರು (ಹೆಚ್.ಎಸ್.ಆರ್ ಬಡಾವಣೆ) | 8105005285 |
| 4 | ಶ್ರೀಮತಿ ಡಾ॥ ಎಸ್ ಲಾವಣ್ಯ ಶೆಟ್ಟಿ | ಪ್ರಾ.ಆ.ಕೇಂ (ವೈದ್ಯರು) | 8971042985 |
| 5 | ಶ್ರೀ ವಿನೋದ್.ಜಿ | ಹಿ.ಆ.ಪ ವಾ.ಸಂ: 174 | 9844629911 |
| 6 | ಶ್ರೀ ಟಿ ನರಸಪ್ಪ | ತೋಟಗಾರಿಕೆ ಪರಿವೀಕ್ಷಕರು | 8105663234 |
| 7 | ಶ್ರೀ ನಾರಾಯಣ.ವಿ | ಗ್ಯಾಂಗ್ ಮೆನ್ | 9739395566 |
| 8 | ಶ್ರೀ ರಾಮಚಂದ್ರ | ಸದ್ಯಸರು | 9845056649 |
| 9 | ಶ್ರೀ ವರಹ ವೆಂಕಟೇಶ್ | ಸ್ವಯಂ ಸೇವಕರು | 988671737 |

- ವಾರ್ಡ್ ಅಧ್ಯಕ್ಷರು/ನೋಡಲ್ ಅಧಿಕಾರಿರವರು ಸಭೆಯಲ್ಲಿ ಹಾಜರಿದ್ದ ಎಲ್ಲಾ ಅಧಿಕಾರಿ/ನೌಕರರನ್ನು ಹಾಗೂ ಸದಸ್ಯರನ್ನು ಸಭೆಗೆ ಸ್ವಾಗತಿಸುತ್ತಾ ಮಾನ್ಯ ಆಯುಕ್ತರವರ ಆದೇಶದಂತೆ ವಾರ್ಡ್ ಮಟ್ಟದಲ್ಲಿ Ward Deter committeeಯನ್ನು ರಚಿಸಿದ್ದು, ಸದರಿ ಸಮಿತಿಯ ಸದಸ್ಯರುಗಳು ತಮ್ಮ ವಾರ್ಡ್ ವ್ಯಾಪ್ತಿಯ ಸ್ವಯಂಸೇವಕರು ಸಹಾಕರದೊಂದಿಗೆ ಸಾರ್ವಜನಿಕರಲ್ಲಿ ಕೋವಿಡ್ ಲಕ್ಷಣಗಳ ಬಗ್ಗೆ ತಿಳುವಳಿಕೆ ನೀಡುವುದರ ಮೂಲಕ ಹೆಚ್ಚಿನ ವಿಶ್ವಾಸ ಮೂಡಿಸಿ, ಆಸ್ಪತ್ರೆಗಳ ಹೊರೆಯನ್ನು ಕಡಿಮೆ ಮಾಡಲು Ward Deter committeeಯ ಉದ್ದೇಶವಾಗಿರುತ್ತದೆ.

ಮು.ತಿ.ನೋ

Scanned with

- ಶ್ರೀಮತಿ ಡಾ॥ ಎಸ್ ಲಾವಣ್ಯ ಶೆಟ್ಟಿ ರವರು ವಾರ್ಡ್ ವ್ಯಾಪ್ತಿಯಲ್ಲಿ ಕೋವಿಡ್-19 ಸೋಂಕಿತರ ಪ್ರಕರಣವನ್ನು ವಿವರಿಸುತ್ತಾ ಕಳೆದ 10 ದಿನಗಳಲ್ಲಿ ಒಟ್ಟು 209 ಪ್ರಕರಣಗಳು ವರದಿಯಾಗಿರುವುದಾಗಿ ಸಭೆಗೆ ತಿಳಿಸಿದ್ದರು.

  1) ಒಟ್ಟು 195 ಸೋಂಕಿತರವರನ್ನು HI's ಇದ್ದರೆ, ಇವರಿಗೆ ಬಿ.ಬಿ.ಎಂ.ಪಿ ವತಿಯಿಂದ Medical Kit ಅನ್ನು ಒದಗಿಸಿದ್ದು, HI's ಅಲ್ಲಿ ಇರುವವರಿಗೆ ದಿನಾಲು ಅವರ ಯೋಗಕ್ಷೇಮವನ್ನು ಕರೆ ಮಾಡಿ ವಿಚಾರಿಸುತ್ತಿದ್ದೇವೆ ಎಂದು ಹಾಜರಿದ್ದ ವೈದ್ಯರು ಸಭೆಗೆ ತಿಳಿಸಿರುತ್ತಾರೆ.
  2) 16 ಸೋಂಕಿತರವರನ್ನು Hosptilize ಮಾಡಲಾಗಿದೆ.(Including Oxygen Bed, ICU Bed & others)
  3) ಈ ವಾರ್ಡ್‌ನಲ್ಲಿ 10 ದಿನಗಳಿಂದ ಒಬ್ಬರು ಕೂಡ ಕೋವಿಡ್-19 ಪ್ರಕರಣದಿಂದ ಮೃತ ಪಟ್ಟಿರುವುದಿಲ್ಲವೆಂದು ವೈದ್ಯರು ಸಭೆಗೆ ತಿಳಿಸಿರುತ್ತಾರೆ.

- ಶ್ರೀ ವರಹಾ ವೆಂಕಟೇಶ್, ಸ್ವಯಂ ಸೇವಕರು ರವರು ಮಾತನಾಡಿ ಕೋವಿಡ್-19 ಸಾಂಕ್ರಾಮಿಕ ರೋಗ ಕಳೆದ ಬಾರಿ ಕೋವಿಡ್ ಪ್ರಕರಣ ಬಂದಾಗ ವಾರ್ಡ್ ವ್ಯಾಪ್ತಿಯಲ್ಲಿ Sanitasation ಮಾಡಲಾಗಿತ್ತು, ಆದರೆ 2ನೇ ಅಲೆಯಲ್ಲಿ ವಾರ್ಡ್ ಮಟ್ಟದಲ್ಲಿ ಸೋಂಕಿತರು ಹೆಚ್ಚಿರುವ ಜಾಗದಲ್ಲಿ Sanitasation ಮಾಡುತ್ತಿಲ್ಲವೆಂದು ವೈದ್ಯರ ಗಮನಕ್ಕೆ ತಂದಿರುತ್ತಾರೆ. ಈ ಬಗ್ಗೆ ಹಿರಿಯ ಆರೋಗ್ಯ ಪರಿವೀಕ್ಷಕರು ವಾ.ಸಂ:174 ರವರುಗಳು ನಮಗೆ ಸರ್ಕಾರದಿಂದ ಯಾವುದೇ ನಿರ್ದೇಶನವಿರುವುದಿಲ್ಲ ಈ ಕುರಿತು ನಾವು ಮೇಲಾಧಿಕಾರಿಗಳ ಜೊತೆ ಚರ್ಚೆ ಮಾಡಿ ಕ್ರಮ ಕೈಗೊಳ್ಳುವುದಾಗಿ ಸಭೆಗೆ ತಿಳಿಸಿರುತ್ತಾರೆ.

- ಹಾಲಿ ಕೋವಿಡ್ ಲಸಿಕೆ ನೀಡಲು ಸರ್ಕಾರದ ಆದೇಶದನ್ವಯ ಯಾವುದೇ ಕ್ಯಾಂಪ್‌ಗಳನ್ನು ಮಾಡುವಂತಿಲ್ಲ ಆದ ಕಾರಣ ವಾರ್ಡ್ 174 ಹೆಚ್.ಎಸ್ ಆರ್ ಬಡಾವಣೆಯ ಅಗರ ಸರ್ಕಾರಿ ಶಾಲೆಯ ಬಳಿ, ಹೆಚ್.ಎಸ್.ಆರ್ ಕ್ಲಬ್ ಬಳಿ 45 ವರ್ಷ ಮೇಲ್ಪಟವರಿಗೆ 1ನೇ & 2ನೇ ಡೋಸ್ ಕೋವಿಡ್ ಲಸಿಕೆಯನ್ನು ನೀಡಲಾಗುತ್ತಿದ್ದು ಹಾಗೂ ಜೆ.ಎಸ್.ಎಸ್ ಶಾಲೆಯ ಬಳಿ Front line Workersಗೆ ಲಸಿಕೆಯನ್ನು ನೀಡಲಾಗುತ್ತಿದೆ ಹಾಗೂ ಪ್ರಸ್ತುತ ಲಸಿಕೆಯ ಕೊರತೆ ಇದ್ದು ಸ್ಟಾಕ್ ಲಭ್ಯತೆ ಅನುಗುಣವಾಗಿ ಲಸಿಕೆ ನೀಡಲಾಗುತ್ತಿದೆ ಎಂದು ಶ್ರೀಮತಿ ಡಾ॥ ಎಸ್ ಲಾವಣ್ಯ ಶೆಟ್ಟಿ ರವರು ಸಭೆಗೆ ತಿಳಿಸಿದರು.

- ಶ್ರೀ ರಾಮಚಂದ್ರ, ಸದ್ಯಸರು ರವರು ಮಾತನಾಡಿ Covaxin & Covishield ಒಟ್ಟಾರೇ ಇಲ್ಲಿಯವರೆಗೂ ಎಷ್ಟು ಜನಸಂಖ್ಯೆಯಲ್ಲಿ ಲಸಿಕೆಯು ನೀಡಲಾಗಿದೆ, ಎಷ್ಟು ಪ್ರಮಾಣದಲ್ಲಿ ಉಪಯೋಗಿಸಲಾಗಿದೆ, ಹಾಗೂ ಎಷ್ಟು ಬಾಕಿ ಉಳಿದಿದೆಯೆಂದು ವಾರ್ಡ್ ಸದ್ಯಸರುಗಳಿಗೆ, ಸ್ಥಳಿಯರಿಗೆ ಮತ್ತು ಸಾರ್ವಜನಿಕರಿಗೆ ಪ್ರಕಟಣೆ ಮಾಡಲು ಕೋರಿರುತ್ತಾರೆ.

ಮು.ತಿ.ನೋ

Scanned with

- ಶ್ರೀ ವರಹಾ ವೆಂಕಟೇಶ್, ಸ್ವಯಂ ಸೇವಕರು ರವರು ಮಾತನಾಡಿ ಕೂಲಿಕಾರ್ಮಿಕರು ಹಾಗೂ ಬಡವರು ಕೋವಿಡ್ ಲಸಿಕೆಯನ್ನು ಹಾಕಿಸಿಕೊಳ್ಳದೆ ವಾರ್ಡ್ ವ್ಯಾಪ್ತಿಯಲ್ಲಿ ಓಡಾಡುತ್ತಿದ್ದು ಇಂತವರಗೆ ಲಸಿಕೆಯನ್ನು ಹಾಕುವುದು ಸೂಕ್ತವೆಂದು ಅಭಿಪ್ರಯವನ್ನು ತಿಳಿಸಿರುತ್ತಾರೆ.
- ಶ್ರೀ ರಾಮಚಂದ್ರ, ಸದ್ಯಸರು ರವರು ಮಾತನಾಡಿ ಪರಂಗಿಪಾಳ್ಯದಲ್ಲಿ ಕೋವಿಡ್-19 ಪ್ರಕರಣವಿದ್ದು, ವಾರ್ಡ್ ವ್ಯಾಪ್ತಿಯಲ್ಲಿ ಸೋಂಕಿತರು ಓಡಾಡುತ್ತಿರುವುದು ಕಂಡು ಬಂದಿದ್ದು ಬೇರೆಯವರಿಗೆ ತಗಲುವ ಸ್ಯಾಧ್ಯತೆವಿರುವುದರಿಂದ ಸೋಂಕಿತರಿಗೆ ಎಚ್ಚರಿಕೆ ನೀಡಲು ಹಾಗೂ ಸದರಿ ಪ್ರದೇಶಲ್ಲಿರುವ ಪರಂಗಿಪಾಳ್ಯದಲ್ಲಿ Testing Camp ಏರ್ಪಡಿಸಲು ಸಮಿತಿ ಗಮನಕ್ಕೆ ತಂದಿರುತ್ತಾರೆ.

ಕಾರ್ಯದರ್ಶಿ, ವಾರ್ಡ್ ನಂ.174ರ
ಸಹಾಯಕ ಅಭಿಯಂತರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಅಧ್ಯಕ್ಷರು/ನೋಡಲ್ ಅಧಿಕಾರಿ
ಸಹಾಯಕ ಕಾರ್ಯಪಾಲಕ ಅಭಿಯಂತರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಪ್ರತಿಯನ್ನು:-**

1. ಮಾನ್ಯ ಆಡಳಿತಗಾರರು, ಬಿ.ಬಿ.ಎಂ.ಪಿ. ರವರ ಅವಗಾಹನೆಗಾಗಿ ಸಲ್ಲಿಸಿದೆ
2. ಮಾನ್ಯ ಮುಖ್ಯ ಆಯುಕ್ತರು, ಬಿ.ಬಿ.ಎಂ.ಪಿ.ರವರ ಅವಗಾಹನೆಗಾಗಿ ಸಲ್ಲಿಸಿದೆ.
3. ಮಾನ್ಯ ವಲಯ ಆಯುಕ್ತರು, ಬೊಮ್ಮನಹಳ್ಳಿ ವಲಯ ರವರ ಅವಗಾಹನೆಗಾಗಿ ಸಲ್ಲಿಸಿದೆ
4. ಮಾನ್ಯ ವಿಶೇಷ ಆಯುಕ್ತರು, (ಆಡಳಿತ) ರವರ ಅವಗಾಹನೆಗಾಗಿ ಸಲ್ಲಿಸಿದೆ.
5. ಜಂಟಿ ಆಯುಕ್ತರು (ಬೊಮ್ಮನಹಳ್ಳಿ ವಲಯ) ರವರ ಅವಗಾಹನೆಗಾಗಿ ಸಲ್ಲಿಸಿದೆ
6. ವಾರ್ಡ್ ಸಮಿತಿಯ ಸದಸ್ಯರ / ಸ್ವಯಂ ಸೇವಕರ ಮಾಹಿತಿಗಾಗಿ ಸಲ್ಲಿಸಿದೆ.
7. ಕಛೇರಿ ಪ್ರತಿ.

Scanned with